ದಿನಾಂಕಃ **17.12.2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ ವಿ ಎಸ್ ವಕೀಲರಿಂದಃ-

ನಾರಾಯಣಪ್ಪ ರವರು ನಿಮಗೆ ಎಷ್ಟು ವರ್ಷದಿಂದ ಪರಿಚಯ ಎಂದರೆ ಸಾಕ್ಷಿ ಆತನು ನನಗೆ ಸುಮಾರು ವರ್ಷಗಳಿಂದ ಪರಿಚಯ. ಅವರು ಬಡ್ಡಿ ವ್ಯವಹಾರ ಮಾಡುತ್ತಾರೆ ಎಂದರೆ ಸರಿಯಲ್ಲ. ಈ ಚೆಕ್ ಪ್ರಕರಣವನ್ನು ಹೊರತುಪಡಿಸಿ ಬೇರೆ ಯಾವುದೇ ಪ್ರಕರಣ ನಾನು ಹೂಡಿರುವುದಿಲ್ಲ. ಆರೋಪಿಯು ನನ್ನಿಂದ ಸಾಲ ಪಡೆದ ದಿನಾಂಕ ಮರೆತುಹೋಗಿದೆ. ಆರೋಪಿಗೆ ಸಾಲ ನೀಡಿದ ದಿನವೇ ಆತನು ಚೆಕ್ ನೀಡಿರುತ್ತಾರೆ. ಚೆಕ್ಕನ್ನು ಪೂರ್ತಿಯಾಗಿ ಬರೆದು ನೀಡಿರುತ್ತಾರೆ. ಚೆಕ್ಕಿನಲ್ಲಿ ದಿನಾಂಕ ನಮೂದಿಸಿ ಕೊಟ್ಟಿರುತ್ತಾನೋ ಇಲ್ಲವೋ ಎಂದು ನನಗೆ ಮರೆತು ಹೋಗಿದೆ. ನಿಪಿ-1 ರ ಚೆಕ್ಕಿನಲ್ಲಿ ಬರೆದಿರುವ ದಿನಾಂಕವನ್ನು ತಿದ್ದಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-5 ರ ನೋಟಿಸನ್ನು ನನಗೆ ಯಾರು ನೀಡಿರುತ್ತಾರೆ ಎಂದು ನನಗೆ ಈಗ ನೆನಪಿಲ್ಲ. ನಿಪಿ-5 ರ ನೋಟಿಸಿನಲ್ಲಿ ದಿಃ 10.09.2014 ರಂದು ರೂ. 1,98,000 ಗಳಷ್ಟು ಹಣವನ್ನು ಪಾವತಿಸಲು ಕೋರಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ 31.03.2022 ರಂದು ಆರೋಪಿಯು ಬ್ಯಾಂಕಿನಿಂದ ಪಡೆದ ಸಾಲವು ತೀರುವಳಿಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ನನ್ನಿಂದ ಯಾವುದೇ ಸಾಲವನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನಿಪಿ-1 ರ ಚೆಕ್ಕನ್ನು ಹೊರತುಪಡಿಸಿ ಬೇರೆ ಯಾವುದೇ ಚೆಕ್ಕನ್ನು ಆರೋಪಿ ನೀಡಿರುವುದಿಲ್ಲ. ನಿಪಿ-3 ರ ಅಂಚೆ ಸ್ವೀಕೃತಿಯಲ್ಲಿ ಆರೋಪಿಯು ಕನ್ನಡದಲ್ಲಿ ಸಹಿ ಮಾಡಿರುತ್ತಾರೆ ಎಂದರೆ ಇರಬಹುದು. ನಿಪಿ-3 ರಲ್ಲಿರುವ ಸಹಿ ಆರೋಪಿಯದ್ದಲ್ಲ ಎಂದರೆ ನನಗೆ ಗೊತ್ತಿಲ್ಲ.

ನಾರಾಯಣಪ್ಪ ರವರು ಈ ದೂರಿನ ಸಲುವಾಗಿ ನನ್ನ ಜೊತೆ ಪ್ರತಿ ದಿನ ನ್ಯಾಯಾಲಯಕ್ಕೆ ಬರುತ್ತಿದ್ದರು ಎಂದರೆ ಸರಿಯಲ್ಲ. ನಿಪಿ-1 ರ ಖಾಲಿ ಚೆಕ್ಕನ್ನು ಆರೋಪಿ ನಾರಾಯಣಪ್ಪ ರವರಿಗೆ ನೀಡಿರುತ್ತಾರೇ ವಿನಃ ನನಗೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನಾರಾಯಣಪ್ಪ ಸೇರಿ ಆರೋಪಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ದೂರು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.,ರವರು, ಕಡೂರು.